**ದಿನಾಂಕಃ 09-03-2022 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಪಾಟೀ ಸವಾಲುಃ 11 ನೇ ಪ್ರತಿವಾದಿಗಳ ಪರ ಶ್ರೀ ಎಸ್.ಎ.ಕೆ ವಕೀಲರಿಂದಃ**

ನಮ್ಮ ತಂದೆ ಖಾಸಿಂ ಸಾಬ್ ಇವರು 1976 ರಲ್ಲಿ ಮೊದಲು ತೀರಿಕೊಂಡಿದ್ದಾರೆ. ನಂತರ ನಮ್ಮ ತಾಯಿ ಜೈತುನ್ ಬಿ ತೀರಿಕೊಂಡಿದ್ದಾರೆ. ಅವರು ತೀರಿಕೊಂಡು 9 ವರ್ಷಗಳು ಆಗಿವೆ. ನಮ್ಮ ತಂದೆ ತೀರಿಕೊಂಡ ನಂತರ 1986 ರಲ್ಲಿ ಆಸ್ತಿಯನ್ನು ಹಂಚಿಕೆ ಮಾಡಿಕೊಂಡಿದ್ದೇವೆ. ಆ ಪ್ರಕಾರ ವಿಪಿಸಿ ನಂ.702/12 ಎ ಇದು 5 ನೇ ಪ್ರತಿವಾದಿಯ ಪಾಲಿಗೆ ಬಂದಿತು ಎಂದರೆ ಸರಿ. ಅದೇ ಪ್ರಕಾರ ನನ್ನ ಹೆಸರು ಮತ್ತು ಇತರೆ ವಾದಿ ಮತ್ತು ಪ್ರತಿವಾದಿ ಹೆಸರು ಬೇರೆ ಆಸ್ತಿಗಳಿಗೆ ಬಂದಿವೆ ಎಂದರೆ ಸರಿ. ನಮ್ಮ ಕುಟುಂಬಕ್ಕೆ ಸರ್ವೆ ನಂ.31/1+2+3 ಬಿ ಎನ್ನುವ ಜಮೀನು ಇದೆ ಎಂದರೆ ಸರಿ. ಅದು ಕೋಡಿಯಾಲ ಹೊಸಪೇಟೆಯಲ್ಲಿದೆ. ಇವುಗಳಲ್ಲದೇ ವಿಪಿಸಿ ನಂ.702/11, 702/11 ಎ, 702/12 ಎ, 702/12/1, 702/12/2, 702/10+ಬಿ, 702/11/ಬಿ, 702/10 ಸಿ ಈ ಆಸ್ತಿಗಳು ನಮ್ಮ ಕುಟುಂಬಕ್ಕೆ ಇವೆ ಎಂದರೆ ಸರಿ. ಅವುಗಳಲ್ಲಿ ಕೆಲವುಗಳಲ್ಲಿ ಮಾರಾಟವಾಗಿ ಅವುಗಳನ್ನು ಖರೀದಿಸಿದರು ಮನೆ ಕಟ್ಟಿಕೊಂಡು ವಾಸವಾಗಿದ್ದಾರೆ ಎಂದರೆ ಸರಿ. ಖಲೀಲ್ ಸಾಬ್ ತನ್ನ ಹೆಸರಿಗೆ ಬಂದ ಆಸ್ತಿಯನ್ನು ವಿ ಪಿ ಸಿ ನಂ, 702/12 ಎ ಇದನ್ನು 10 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದನು ದಿನಾಂಕ 13-06-2016 ರಂದು 5,10,000/- ರೂ.ಗಳಿಗೆ ಮಾರಾಟ ಮಾಡಿದ್ದನು ಎಂದರೆ ಸರಿ. ಈ ಎಲ್ಲಾ ವಿಷಯ ನನಗೆ, ವಾದಿಗೆ, ನಮ್ಮ ಗರಾಣೆಯ ಇತರೆ ಸದಸ್ಯರಿಗೆ ಗೊತ್ತಿತ್ತು ಎಂದರೆ ಸರಿ. ಪ್ರತಿವಾದಿ 10 ರವರು ತಾವು ಖರೀದಿಸಿದ್ದ ಆಸ್ತಿಯನ್ನು ಪ್ರತಿವಾದಿ 11 ರವರಿಗೆ ಕೊಟ್ಟು, ಪ್ರತಿವಾದಿ 11 ರವರ ಆಸ್ತಿಯಾದ ವಿಪಿಸಿ ನಂ.55/7 ನ್ನು ಒಂದು ನೊಂದಾಯಿತ ಅದಲು ಬದಲು ಪತ್ರದ ಮೂಲಕ ದಿನಾಂಕ 02-11-2017 ರಂದು ತೆಗೆದುಕೊಂಡಿದ್ದಾರೆ ಎಂದರೆ ಸರಿ. ಈಗ ದಾವಾ ಐಟೆಂ ನಂ.11 ರಲ್ಲಿ 11 ನೇ ಪ್ರತಿವಾದಿ ವಾಸವಾಗಿದ್ದಾರೆ ಎಂದರೆ ಸರಿ. ದಾವಾ ಐಟೆಂ ನಂ.11 ರಲ್ಲಿ ನನಗಾಗಲೀ ಹಾಗೂ ಇತರೆ ವಾದಿ ಪ್ರತಿವಾದಿಗಳಿಗಾಗಲೀ ಹಕ್ಕು ಇಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 10 ನೇ ಪ್ರತಿವಾದಿಗಳ ಪರ ಶ್ರೀ ಎ.ಎಸ್.ಕೆ ವಕೀಲರು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.**

**ಪಾಟೀ ಸವಾಲುಃ 5 ನೇ ಪ್ರತಿವಾದಿಗಳ ಪರ ಶ್ರೀ ಕೆ.ಎ.ಎಸ್. ವಕೀಲರಿಂದಃ**

ನಮ್ಮ ತಾಯಿ ಇದ್ದಾಗ ನಮ್ಮ ತಾಯಿ ಮತ್ತು ಎಲ್ಲಾ ಸಹೋದರ ಸಹೋದರಿಯರ ಮದ್ಯೆ ವಾಟಿಯಾಗಿತ್ತು ಎಂದರೆ ಸರಿ. ಅದರಂತೆ ನಮಗೂ ಮತ್ತು ವಾದಿ ಹಾಗೂ ಇತರೆ ಪ್ರತಿವಾದಿಗಳಿಗೆ ಆಸ್ತಿ ಹಂಚಿಕೆ ಮಾಡಿದ್ದಾರೆ ಎಂದರೆ ಸರಿ. ವಿಪಿಸಿ ನಂ.50/45 ಕೋಡಿಯಾಲ ಹೊಸಪೇಟೆ ಆಸ್ತಿಯಲ್ಲಿ ನನಗೆ, ಶೌಕತ್ ಅಲಿ ಇವರಿಗೆ, ಖಲೀಲ್ ಇವರಿಗೆ ಒಟ್ಟಿಗೆ 23 X 45 ಅಡಿ ಜಾಗ ಬಂದಿದೆ ಎಂದರೆ ಸರಿ. ಆಗ ಆದ ವಾಟ್ನಿಯಲ್ಲಿ ವಾದಿ, ಪ್ರತಿವಾದಿ 2 ರಿಂದ 4 ರವರಿಗೂ ಸಹ ಭಾಗ ಬಂದಿದೆ ಎಂದರೆ ಸರಿ.

2. ನಮ್ಮ ಕುಟುಂಬಕ್ಕೆ ಇದ್ದ ಜಮೀನು ಈಗಾಗಲೇ ಭೂ ಪರಿವರ್ತನೆ ಆಗಿದೆ ಎಂದರೆ ಸರಿ. ಶೆಡ್ಯೂಲ ಬ ದಲ್ಲಿ ತೋರಿಸಿದ ಸರ್ವೆ ನಂ.31/ಅ 1, ಸರ್ವೇ ನಂ.31/ಅ 2 ಇವುಗಳು ಈಗಾಗಲೇ ಎನ್ ಎ ಸೈಟುಗಳಾಗಿ ಮಾರಾಟವಾಗಿವೆ ಎಂದರೆ ಸರಿ. ದಿನಾಂಕ 07-07-1980 ರಂದು ಅ ವಿಭಾಜಿತ ದಾರವಾಡ ಜಿಲ್ಲೆ ಇದ್ದಾಗ ಅದು ಭೂ ಪರಿವರ್ತನೆ ಆಗಿದೆ ಎಂದರೆ ಸರಿ. ಭೂ ಪರಿವರ್ತನೆ ಆಗುವ ಸಮಯದಲ್ಲಿ ಕೊಟ್ಟ ನಕ್ಷೆಯ ಪ್ರಕಾರ ಎಲ್ಲಾ ಸೈಟು ಮಾರಾಟವಾಗಿದೆ ಎಂದರೆ ಸರಿ. ಅದರಲ್ಲಿ ಪ್ಲಾಟ್ ನಂ.10,11 ಮತ್ತು 12 ಇವುಗಳು ನನಗೆ ಸಂಬಂದಿಸಿದ ಪ್ಲಾಟುಗಳು ಎಂದರೆ ಸರಿ. 21 ಗುಂಟೆಯ ಆಸ್ತಿ ಸೈಟುಗಳು ಆಗಿವೆ ಎಂದರೆ ಸರಿ. 4 ಗುಂಟೆ ಕರಾಬು ಇದೆ ಎಂದರೆ ಸರಿ. ವಾದಿ ಹೇಳುವಂತೆ ಈಗ ಯಾವುದೇ ಕೃಷಿ ಜಮೀನು ಇಲ್ಲ ಎಂದರೆ ಸರಿ.

3. ಶೆಡ್ಯೂಲ್ ಕ ದಲ್ಲಿರುವ ವಿಪಿಸಿ ನಂ.702/12 ಎ ಇದು ಪ್ರತಿವಾದಿ 5 ರವರಿನಲ್ಲಿತ್ತು ಎಂದರೆ ಸರಿ. ಆ ಹಿಸ್ಸೆಯಲ್ಲಿ ಬಂದ ಆಸ್ತಿಯನ್ನು 5 ನೇ ಪ್ರತಿವಾದಿ ಕಾನೂನು ಪ್ರಕಾರವಾಗಿ 10 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಅದು ವಾಟ್ನಿ ಮೂಲಕ 5 ನೇ ಪ್ರತಿವಾದಿಗೆ ಬಂದ ಸ್ವಂತ ಆಸ್ತಿ ಆಗಿತ್ತು ಎಂದರೆ ಸರಿ. ವಿಪಿಸಿ ನಂ.218 ಇದನ್ನು ನನ್ನ ಅತ್ತೆ ಮಾರಾಟ ಮಾಡಲು ತೆಗೆದಿದ್ದರು. ಆಗ ಅದನ್ನು ನಾನು ಖರೀದಿಸಿದ್ದೇನೆ. ದಾವಾ ಶೆಡ್ಯೂಲ್ ಕ ದಲ್ಲಿ ಇರುವ 3 ನೇ ಆಸ್ತಿಯನ್ನು ಶೌಕತ್ ಅಲಿ ಮತ್ತು ಖಲೀಲ ಇವರು ನನಗೆ ಮಾರಾಟ ಮಾಡಿದ್ದಾರೆ. ವಾದಿಯ ಗಂಡನ ಹೆಸರು ಇಸ್ಮಾಯಿಲ್ ಸಾಬ್ ಇರುತ್ತದೆ.

4. ವಿಪಿಸಿ ನಂ.702/10 ಎ ಇದನ್ನು ನನ್ನ ತಂಗಿಯ ಗಂಡನಿಗೆ ಕ್ರಯ ಪತ್ರದ ಮೂಲಕ ನಾವೆಲ್ಲರೂ ಸೇರಿ ಪಾಲು ಕೊಡುವ ಉದ್ದೇಶದಿಂದ ಖರೀದಿ ಪತ್ರದ ಹೆಸರಿನಲ್ಲಿ ಕೊಟ್ಟಿದ್ದೇನೆ

ಎಂದರೆ ಸರಿ. ನಾವು ಇಸ್ಮಾಯಿಲ್ ಸಾಬ್ ಇವರಿಂದ ಯಾವುದೇ ಹಣ ಪಡೆದಿಲ್ಲ. ನಾವು ಈ ಹಿಂದೆ ವಾದಿಗೆ ನಮ್ಮ ಕುಟುಂಬದ ಆಸ್ತಿಯಲ್ಲಿ ಭಾಗ ಕೊಟ್ಟಿದ್ದೇವೆ ಎಂದರೆ ಸರಿ. ಕೊಡಿಯಾಲ ಹೊಸಪೇಟೆಯಲ್ಲಿರುವ ವಿಪಿಸಿ ನಂ.702/10 ಇ ಇದನ್ನು ಆಸ್ತಿಯಲ್ಲಿ ಭಾಗವಾಗಿ ಕೊಟ್ಟಿದ್ದೇವೆ ಎಂದರೆ ಸರಿ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

Sd/-

(ಜೆ.ವಿ.ಕುಲಕರ್ಣಿ)

1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.